ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ ನಾಳೆ ಏನಾದರೂ ಮಾತನಾಡಬೇಕು. ಏಕೆಂದರೆ ಆ ಎರಡೂ ಡಿಮ್ಯಾಂಡ್ ಇಂಪ್ಲಾಟೆಂಟ್ ಡಿಮ್ಯಾಂಡ್. ಅದರ ಬಗ್ಗೆ ಸ್ವಲ್ಪ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟು, ನಾಳೆ ಮಧ್ಯಾಹ್ನದ ಮೇಲೆ ವೀರಪ್ಪನ್‌ದು ಇದೆ.

ಅಧ್ಯಕ್ಷರು : ವೀರಪ್ಪನ್‌ದು ಆದರೂ ಬರಲಿ, ಯಾರಾದರೂ ಬರಲಿ ನನಗೆ ಏನು ತಕರಾರು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ, ತಾವೇ ಮಂಗಳವಾರ ತೆಗೆದುಕೊಳ್ಳೋಣ ಎಂದು ಹೇಳಿದಿರಿ.

ಅಧ್ಯಕ್ಷರು : ಹೌದು ಹೇಳಿದ್ದೀನಿ, ಇಲ್ಲಾ ಎಂದು ಹೇಳಲಿಲ್ಲವಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದರ ಪ್ರಕಾರ ನಾನು ಕೇಳುತ್ತಾ ಇದ್ದೇನೆ.

ಅಧ್ಯಕ್ಷರು : ಈ ತೋಟಗಾರಿಕೆ ವಿಷಯದ ಬಗ್ಗೆ ಹೇಳುತ್ತಾ ಇದ್ದರಲ್ಲಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಾನು ಪ್ರಸ್ತಾಪ ಮಾಡತಕ್ಕಂಥದ್ದು ತೋಟಗಾರಿಕೆ ಹಗರಣ.

ಮಾನ್ಯ ಸದಸ್ಯರು : ನಾಳೆ ತೆಗೆದುಕೊಳ್ಳಿ ಎಲ್ಲಾ ಒಂದೇ ದಿನ ತೆಗೆದುಕೊಳ್ಳುವುದು ಬೇಡ.

ಅಧ್ಯಕ್ಷರು : ನೆಕ್ಸ್ಟ್ ಕಾಲಿಂಗ್ ಅಟೆನಷನ್, ಕಾಲಿಂಗ್ ಅಟೆನ್‌ಷನ್ ಬರುತ್ತಾ ಎಂದು ಗೃಹಮಂತ್ರಿಗಳು ಕೇಳಿದರು, ಅದಕ್ಕೆ ಇದು ಮುಗಿದ ತಕ್ಷಣ ಕಾಲಿಂಗ್ ಅಟೆನ್‌ಷನ್ ಎಂದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಾನು ತೆಗೆದುಕೊಳ್ಳಬಹುದಾ?

ಅಧ್ಯಕ್ಷರು : ತೆಗೆದುಕೊಳ್ಳಿ.

ತೋಟಗಾರಿಕೆ ಇಲಾಖೆಯಲ್ಲಿ ಅವ್ಯವಹಾರ

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಡಿವಿಷನ್‌ನಲ್ಲಿ ಈ ತೋಟಗಾರಿಕೆ ಇಲಾಖೆಯಲ್ಲಿ ಹೆಚ್ಚು ಕಡಿಮೆ ಸುಮಾರು 15ರಿಂದ 20 ಕೋಟಿ ರೂಪಾಯಿಗಳವರೆಗೆ ಮೋಸ ನಡೆದಿದೆ ಎನ್ನತಕ್ಕಂಥದ್ದು ಇತ್ತೀಚೆಗೆ ಬೆಳಕಿಗೆ ಬಂದಿದೆ. ಬಿಹಾರದಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿ ಫಾಡರ್ ಸ್ಕ್ಯಾಂ ನಡೆದಿದೆ. ಆದರೆ, ಈ ತೋಟಗಾರಿಕೆ ಇಲಾಖೆಯಲ್ಲಿ 15ರಿಂದ 20 ಕೋಟಿ ರೂಪಾಯಿಗಳವರೆಗೆ ಅವ್ಯವಹಾರ ನಡೆದಿದೆ ಎಂದರೆ ಇದು ಒಂದು ಆಶ್ಚರ್ಯ ಉಂಟುಮಾಡತಕ್ಕಂತಹ ಸಂಗತಿ. ಇದಕ್ಕ ಕಾರಣ ಕರ್ತರಾದಂತಹ ಶ್ರೀಮಾನ್ ಯು.ಪಿ. ಚೌದರಿ, ಇವರು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಜಾಯಿಂಟ್ ಡೈರೆಕ್ಟರ್ ಮತ್ತು ಪಂಡಿತ್ ನೂಲಾ, ಅಸಿಸೆಟೆಂಟ್ ಡೈರೆಕ್ಟರ್, ನಾರಾಯಣ್‌ಪುರ್, ನಂತರ ಶ್ರೀಮಾನ್ ಸಿದ್ದಕ್ಕಿ, ಇವರೆಲ್ಲರೂ ಸೇರಿಕೊಂಡು ಈ ಒಂದು ಹೆಚ್ಚಿನ ಹಣವನ್ನು, ಅಂದರೆ ಗ್ರಾಂಟ್ ಎಷ್ಟು ಇದೆ,

ಅದಕ್ಕಿಂತಲೂ ಹೆಚ್ಚಿನ ಹಣವನ್ನು ಟ್ರಜರಿಯಿಂದ ಡ್ರಾ ಮಾಡತಕ್ಕಂತಹ ಕೆಲಸವನ್ನು ಮಾಡಿದ್ದಾರೆ. ಅವರು ಬಜೆಟ್‌ನಲ್ಲಿ ಇರತಕ್ಕಂತಹ ಪ್ರಾವಿಷನ್ ಏನು ಇದೆ, ಅದಕ್ಕಿಂತಲೂ ಹೆಚ್ಚಿನ ಹಣವನ್ನು ಅವರು ಡ್ರಾ ಮಾಡಬೇಕಾದರೆ ಅದಕ್ಕೆ ಟ್ರಜರಿ ಆಫೀಸರ್ ಕಾನ್ಸ್‌ಪಿರೆಸಿ ಇಲ್ಲದೆ ಮಾಡುವುದಕ್ಕೆ ಸಾಧ್ಯ ಇಲ್ಲ. ಇಷ್ಟೊಂದು ಹೆಚ್ಚಿನ ಮೊತ್ತದಲ್ಲಿ ಹಣವನ್ನು ಅವರು ತೆಗೆದುಕೊಳ್ಳಬೇಕಾದರೆ, ಇದರಲ್ಲಿ ಯಾರ್ಯಾರು ಶಾಮೀಲು ಇದ್ದಾರೆ, ಇದನ್ನು ಹೇಗೆ ಮಾಡಿದ್ದಾರೆಂಬುದು ಗೊತ್ತಾಗಬೇಕು. ಇದೇನು ಒಂದು ವರ್ಷದಲ್ಲಿ ಅಥವಾ ಆರು ತಿಂಗಳಲ್ಲಿ ಆಗಿರತಕ್ಕಂಥದ್ದಲ್ಲ. ಸುಮಾರು 5-6 ವರ್ಷಗಳಿಂದ ಇದು ನಡೆದುಕೊಂಡು ಬಂದಿದೆ ಎಂಬುದು ಬೆಳಕಿಗೆ ಬಂದಿದೆ, ಇದು ತಮ್ಮ ಗಮನಕ್ಕೂ ಕೂಡ ಬಂದಿರಬಹುದು.

5.40 ಪಿ.ಎಂ.

ಈ ವರದಿ ಪ್ರಕಾರ 1994-95ರಲ್ಲಿ ಗುಲ್ಬರ್ಗಾ ಜಿಲ್ಲೆಗೆ ಆಯವ್ಯಯದಲ್ಲಿ ಹಂಚಿಕೆಯಾಗಿದ್ದು 43,95,425 ಲಕ್ಷ ರೂಪಾಯಿಗಳಾದರೆ, ಡ್ರಾ ಮಾಡಿದ್ದು 1,17,11,784 ಕೋಟಿ ರೂಪಾಯಿಗಳು. ಅಂದರೆ ಬಜೆಟರಿ ಪ್ರಾವಿಜನ್‌ಗಿಂತ ಎರಡು ಪಟ್ಟು ಜಾಸ್ತಿಯಾಗಿ 74 ಲಕ್ಷ ರೂಪಾಯಿಗಳಷ್ಟು ಹೆಚ್ಚು ಹಣ ಟ್ರೆಜರಿಯಿಂದ ಡ್ರಾ ಮಾಡಿದ್ದಾರೆ. ಅದೇ ರೀತಿ 1996-97ರಲ್ಲಿ 60,91,000 ಲಕ್ಷ ರೂಪಾಯಿಗಳಷ್ಟು ಬಜೆಟರಿ ಅಲಾಟ್‌ಮೆಂಟ್ ಇದ್ದರೆ, ಡ್ರಾ ಮಾಡಿರುವುದು 2,65,07,932 ಕೋಟಿ ರೂಪಾಯಿಗಳು. ಇದರಲ್ಲಿ ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ಎಕ್ಸೆಸ್ ಹಣವಿದೆ. ನಾನು ಏಕೆ ಈ ಅಂಕಿ-ಸಂಖ್ಯೆಗಳನ್ನು ನೀಡುತ್ತಿದ್ದೇನೆಂದರೆ, ಇಷ್ಟೊಂದು ಹಣ ಡ್ರಾ ಮಾಡಬೇಕಾದರೆ ಇದರಲ್ಲಿ ಟ್ರೆಜರಿ ಡಿಪಾರ್ಟ್‌ಮೆಂಟ್‌ನವರು ಮತ್ತ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನವರಿಬ್ಬರೂ ಸೇರಿ ಇವೊತ್ತು ಇಷ್ಟೊಂದು ಕೋಟ್ಯಾಂತರ ರೂಪಾಯಿಗಳನ್ನು ಡ್ರಾ ಮಾಡಿರುವುದನ್ನು ರಾಜ್ಯದ ಒಂದು ಭಾಗದಲ್ಲಿ ಕಂಡುಹಿಡಿದಿದ್ದಾರೆ. ಇದೇ ರೀತಿ ಅನೇಕ ಜಿಲ್ಲೆಗಳಲ್ಲೂ ಆಗಿರಬಹುದು. ಏಕೆಂದರೆ, ಆ ಇಲಾಖೆಯಲ್ಲಿ ಇಂತಹ ಒಂದು 'ಬ್ರೇನ್' ಇರಬೇಕಾದರೆ ಇದರ ಸಪ್ಲೈ ಎಲ್ಲಾ ಕಡೆಗಳಿಗೂ ಆಗಿರಬಹುದು. ಅದಕ್ಕೋಸ್ಕರ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುವುದೇನೆಂದರೆ, ಈ ಹಗರಣ ಬೆಳಕಿಗೆ ಬಂದಿರುವುದರಿಂದ ಇಡೀ ತೋಟಗಾರಿಕೆ ಇಲಾಖೆಗೆ ಬಜೆಟರಿ ಪ್ರಾವಿಜನ್ ಇದ್ದುದ್ದು ಎಷ್ಟು? ಎಷ್ಟು ಮೊತ್ತದ ಹಣವನ್ನು ಡ್ರಾ ಮಾಡಿದ್ದಾರೆ? ಎನ್ನುವ ಸಂಪೂರ್ಣ ಮಾಹಿತಿ ಸಿಗಬೇಕು ಮತ್ತು ಈ ಹಗರಣದಲ್ಲಿ ಯಾರ್ಯಾರು ಭಾಗಿಯಾಗಿದ್ದಾರೆ, ಜಂಟಿ ನಿರ್ದೇಶಕರು, ಅಸಿಸ್ಟೆಂಟ್ ಡೈರೆಕ್ಟರ್, ಡೈರೆಕ್ಟರ್, ಇವರುಗಳ ಹಿಂದೆ ರಾಜಕಾರಣಿಗಳು ಯಾರಾದರೂ ಇದ್ದಾರೆಯೇ? ಅಥವಾ ಯಾರಾದರೂ ಪ್ರಮುಖ ಮುಖಂಡರಿದ್ದಾರೆಯೇ? ಅಥವಾ ಇದಕ್ಕೆ ಬೆಂಬಲ ನೀಡುವ ಯಾರಾದರೂ ಶಕ್ತಿಶಾಲಿ ಜನರಿದ್ದಾರೆಯೇ? ಎನ್ನುವುದು ಕೂಡ ಹೊರಗಡೆ ಬರಬೇಕಾಗುತ್ತದೆ. ಇದು ಹೊರಗಡೆ ಬರಬೇಕೆಂದರೆ ಕೇವಲ ಇಲಾಖೆ ವತಿಯಿಂದ ನೀವು ಎನಕ್ವೈರಿ ಮಾಡಿದರೆ ಆಗುವುದಿಲ್ಲ, ಈ ಪ್ರಕರಣದ ತನಿಖೆಗಾಗಿ ಸಿ.ಬಿ.ಐ.ಗೆ ಕೊಡಿ. 'ಇದು ಇಡೀ ಇಲಾಖೆಯಲ್ಲಿ ಕೇವಲ 15-20 ಕೋಟಿ ರೂಪಾಯಿಗಳ ಹಗರಣವಾಗಿರುವುದರಿಂದ ಸಿ.ಬಿ.ಐ.ಗೆ ಕೊಡುವುದು ಬೇಡ' ಎಂದರೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗಾದರೂ ಒಪ್ಪಿಸಿ, ಒಂದು ತಿಂಗಳೊಳಗೆ ಆ ಸಮಿತಿಯಿಂದ ವರದಿ ತರಿಸಿಕೊಳ್ಳಿ.

ಈ ಹಗರಣದಲ್ಲಿ ಯಾರ್ಯಾರು ಭಾಗಿಯಾಗಿದ್ದಾರೋ ಅವರ ಹೆಸರುಗಳು ಹೊರಗಡೆ ಬರಲಿ. ಹಗರಣದಲ್ಲಿ ಭಾಗಿಯಾದ ತಪ್ಪಿತಸ್ಥ ಅಧಿಕಾರಿಗಳನ್ನು ನೀವು ಏನು ಸಸ್ಪೆಂಡ್ ಮಾಡಿದ್ದೀರಿ, ಮೊನ್ನೆ ದಿವಸ ಈ ಕುರಿತ ವರದಿ ಪತ್ರಿಕೆಯಲ್ಲಿ ಬಂದನಂತರ ಮತ್ತು ಆ ಇಲಾಖೆಯ ಜಾಯಿಂಟ್ ಡೈರೆಕ್ಟರ್ (ಅಡ್ಮಿನಿಸ್ಟ್ರೇಷನ್) ಏನಿದ್ದಾರೆ, ಅವರು ಹಗರಣವನ್ನು ಬಯಲಿಗೆ ತಂದರು ಎನ್ನುವ ಅಭಿಪ್ರಾಯವಿದ್ದರೂ ಕೂಡ ಇದನ್ನು ವಿಶೇಷವಾಗಿ ಇನ್‌ವೆಸ್ಟಿಗೇಶನ್ ಮಾಡಿದ್ದು ಪತ್ರಕರ್ತರು. ಅದಕ್ಕೋಸ್ಕರ, ನಾನು ಇವೊತ್ತು ತಮ್ಮ ಮುಖಾಂತರ ಸರ್ಕಾರದಲ್ಲಿ ಕೇಳಿಕೊಳ್ಳುವುದೇನೆಂದರೆ, ಇದನ್ನು ಸಿ.ಬಿ.ಐ. ಎನ್‌ಕ್ವೈರಿಗೆ ಒಪ್ಪಿಸಿ, ಇಲ್ಲದಿದ್ದರೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗಾದರೂ ಒಪ್ಪಿಸಿ ಇಲಾಖೆಯ ಆಗು-ಹೋಗುಗಳ, ಬಜೆಟರಿ ಅಲಾಟ್‌ಮೆಂಟ್, ಎಕ್ಸ್‌ಪೆಂಡಿಚರ್ ಮತ್ತು ಹಣ ಡ್ರಾ ಮಾಡಿರುವುದರ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡು ಈ ಸದನದ ಮುಂದಿಟ್ಟರೆ ಯಾರ್ಯಾರು ಏನೇನು ಮಾಡಿದ್ದಾರೆಂದು ಗೊತ್ತಾಗುತ್ತದಾದ್ದರಿಂದ ಈ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

+ ಶ್ರೀ ಡಿ.ಟಿ ಜಯಕುಮಾರ್ (ತೋಟಗಾರಿಕೆ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಈ ವಿಚಾರದಲ್ಲಿ ಸರ್ಕಾರವನ್ನು ವಿರೋಧ ಪಕ್ಷದವರು ಅಭಿನಂದಿಸಬೇಕು. ಏಕೆಂದರೆ, ಈ ಹಗರಣ ಕಂಡುಹಿಡಿದವರೇ ನಾವು. ಇದು ಬಹಶಃ ಹತ್ತು ವರ್ಷಗಳಿಂದ ಈ ರೀತಿ ಆಗುತ್ತಿರಬಹುದು. ಈ ಕೆಲಸವನ್ನು ನಮ್ಮ ಇಲಾಖೆಯವರೊಬ್ಬರೇ ಮಾಡಿದರೆ ಬೇರೆ ಇಲಾಖೆಯ ಕೆಲವು ದುಷ್ಟ ಶಕ್ತಿಗಳು ಇದರಲ್ಲಿ ಸೇರಿ ಮಾಡಿರಬಹುದೆಂಬುದರಲ್ಲಿ ಅನುಮಾನವಿಲ್ಲವೆಂದು ಕಾಣುತ್ತದೆ. ಆದರೂ ಕೂಡ ಇದನ್ನು ಮೊದಲು ಕಂಡು ಹಿಡಿದವರು ನಾವು. ಈ ಕುರಿತು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿರುವುದಲ್ಲದೆ ಲೋಕಾಯುಕ್ತಕ್ಕೂ ಕೂಡ ಬರೆದಿದ್ದೇವೆ. ಹಗರಣದ ಬಗ್ಗೆ ನಾವು ಹೇಳಿದ ನಂತರವೇ ಪತ್ರಿಕೆಯಲ್ಲಿ ಪ್ರಕಟವಾಗಿರುವುದು. ಅದೇನೇ ಇರಲಿ, ಈ ಸಂದರ್ಭದಲ್ಲಿ ಅಧ್ಯಕ್ಷರ ಮುಖಾಂತರ ಈ ಕೆಳಕಂಡ ಹೇಳಿಕೆ ನೀಡಲು ಇಷ್ಟಪಡುತ್ತೇನೆ.

1996-97ರ ಖರ್ಚು ವೆಚ್ಚಗಳನ್ನು ಆರ್ಥಿಕ ವರ್ಷದ ಅಂತ್ಯದಲ್ಲಿ ಪರಿಶೀಲಿಸುವಾಗ ನೀಡಿದ ಅನುದಾನಕ್ಕಿಂತ ಹೆಚ್ಚು ಹಣವನ್ನು ಖಜಾನೆಯಿಂದ ಗುಲ್ಬರ್ಗಾ ವಿಭಾಗದ ನಾರಾಯಣಪುರ ತೋಟಗಾರಿಕೆ ಕ್ಷೇತ್ರದಲ್ಲಿ ನಿರ್ದಿಷ್ಟವಾಗಿ ಹೆಚ್ಚು ಹಣವನ್ನು ನಗದುಪಡಿಸಿರುವುದು ಗಮನಕ್ಕೆ ಬಂದಿರುತ್ತದೆ.

ಈ ಬಗ್ಗೆ ಕೂಲಂಕುಷ ತನಿಖೆಯನ್ನು ಕೈಗೆತ್ತಿಕೊಳ್ಳಲಾಗಿ ಕಳೆದ ಮೂರು ವರ್ಷಗಳಿಂದ ಅಂದರೆ 1994-95, 1995-96 ಹಾಗೂ 1996-97 ರಲ್ಲಿ ಸುಮಾರು 5.00 ಕೋಟಿ ಹಣವನ್ನು ಹೆಚ್ಚಾಗಿ ನಗದುಪಡಿಸಿರುವುದನ್ನು ಪತ್ತೆ ಹಚ್ಚಲಾಗಿದೆ. ಹಾಗೂ ಇದರಲ್ಲಿ ಕಂಡುಬಂದ ಅಂಶವೆಂದರೆ ಕೊಟ್ಟ ಬಿಲ್ಲುಗಳನ್ನು ಸೃಷ್ಟಿಸಿ ಬಟವಾಡೆ ಅಧಿಕಾರಿಗಳು,ನಿಯಂತ್ರಣಾಧಿಕಾರಿಗಳು ಹಾಗೂ ಇತರೆ ನೌಕರರ ಹಾಗೂ ಇತರೆ ನೌಕರರ ಹಾಗೂ ಖಜಾನೆಯವರ ಶಾಮೀಲಿನೊಂದಿಗೆ ಈ ಕೃತ್ಯ ನಡೆದಿರುವುದು ಸ್ಪಷ್ಟವಾಗಿದೆ. ಈ ಬಗ್ಗೆ ಇಲಾಖೆಯು ಪ್ರಕರಣದ ಸಮಗ್ರ ತನಿಖೆಗೆ ಲೋಕಾಯುಕ್ತವನ್ನು ಕೋರಿದ್ದು ಅವರು ಈಗಾಗಲೇ ಕಾರ್ಯಪ್ರವರ್ತರಾಗಿರುತ್ತಾರೆ. ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳನ್ನು ಲೋಕಾಯುಕ್ತದಿಂದ ನಿರೀಕ್ಷಿಸಲಾಗುತ್ತಿದೆ.

ಈ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ ಹಾಗೂ ನೌಕರರನ್ನು ಇಲಾಖಾ ವಿಚಾರಣೆ ಭಾಕಿ ಇರಿಸಿ ತಕ್ಷಣದಿಂದಲೇ ಅಮಾನತ್ತಿನಲ್ಲಿರಿಸಲಾಗಿದೆ. ಅವರುಗಳ ವಿವರ ಈ ಕೆಳಗಿನಂತಿದೆ.

1)	ಶ್ರೀ ವಿ.ಬಿ. ಚೌಧರಿ,	ಜಂಟಿ ನಿರ್ದೇಶಕರು, ಗುಲ್ಬರ್ಗಾ ವಿಭಾಗ,
2)	ಶ್ರೀ ಎಂ.ಎ. ಸಿದ್ದಿಕಿ,	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯ ವಲಯ, ಗುಲ್ಬರ್ಗಾ
3)	ಶ್ರೀ ಪಂಡಿತ್ ನೂಲಾ,	ಸಹಾಯಕ ತೋಟಗಾರಿಕೆ ಅಧಿಕಾರಿ, ಪ್ರಭಾರಿ, ಸ.ತೋ.ನಿರ್ದೇಶಕರು, ನಾರಾಯಣಪುರ ತೋಟಗಾರಿಕೆ ಕ್ಷೇತ್ರ.
4)	ಶ್ರೀ ಎ.ಡಿ. ಸಾವಳ್ಕರ್,	ಅಧೀಕ್ಷಕರು, ಹಿ.ಸ.ತೋ.ನಿ. (ರಾ.ವ) ಕಛೇರಿ, ಗುಲ್ಬರ್ಗಾ
5)	ಶ್ರೀ ಸತ್ಯನಾರಾಯಣರಾವ್	ಪ್ರ.ದ.ಸ. ಹಿ.ಸ.ತೋ.ನಿ(ರಾ.ವ) ಗುಲ್ಬರ್ಗಾ
6)	ಶ್ರೀ ಶ್ರೀಕಂಠಯ್ಯ,	ಅಧೀಕ್ಷಕರು, ಲೆಕ್ಕ ತನಿಖಾ ಶಾಖೆ, ಲಾಲ್‌ಬಾಗ್, ಬೆಂಗಳೂರು
7)	ಶ್ರೀ ಡಿ.ಹೆಚ್. ಶ್ರೀನಿವಾಸ ಮೂರ್ತಿ	ಹಿಂದಿನ ಪ್ರ.ದ.ಸ. ಲೆಕ್ಕ ತನಿಖಾ ಶಾಖೆ, ಲಾಲ್‌ಬಾಗ್, ಬೆಂಗಳೂರು.
8)	ಶ್ರೀ ಹೆಚ್.ಟಿ. ವೆಂಕಟರಾಂ	-"- -"-
9)	ಶ್ರೀ ಎಂ. ರುದ್ರಪ್ಪ,	ಹಿಂದಿನ ಪ್ರ.ದ.ಸ. ಲೆಕ್ಕ ಮರುಹೊಂದಾಣಿಕೆ ಶಾಖೆ, ಲಾಲ್‌ಬಾಗ್, ಬೆಂಗಳೂರು.
10)	ಶ್ರೀ ಹೆಚ್.ಎನ್.ರಾಜಣ್ಣ	ಪ್ರ.ದ.ಸ. ಲೆಕ್ಕ ಮರುಹೊಂದಾಣಿಕೆ ಶಾಖೆ, ಲಾಲ್‌ಬಾಗ್, ಬೆಂಗಳೂರು.

ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮವನ್ನು ಕೈಗೊಳ್ಳಲಾಗುವುದು, ಅಪಾದಿತರು ಯಾರೇ ಆಗಿದ್ದರೂ ಕಾನೂನು ಕ್ರಮಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಪ್ರಕರಣವನ್ನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಒಪ್ಪಿಸಿ ಎಂದು ಏಕೆ ಕೇಳಿದೆನೆಂದರೆ, ಇದೇ ರೀತಿ ಬೇರೆ ಇಲಾಖೆಗಳಲ್ಲೂ ಆಗಿರುವ ಸಾಧ್ಯತೆಯಿದೆ. ಇದನ್ನು ತಡೆಗಟ್ಟಿ ಯಾವ ರೀತಿಯಾಗಿ ನಿಲ್ಲಿಸಬಹುದು ಎಂಬುದರ ಬಗ್ಗೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯವರಾದರೂ ಇದನ್ನು ಪರಿಶೀಲಿಸಿ ವಿಚಾರ ಮಾಡಿ ಒಂದು ವರದಿ ಕೊಟ್ಟರೆ, ಬೇರೆ ಇಲಾಖೆಯಲ್ಲಿ ಇಂತಹ ಪ್ರಕರಣ ನಡೆದಿದ್ದರೆ...

ಶ್ರೀ ಜೆ.ಹೆಚ್.ಪಟೇಲ್ : ಪಿ.ಎ.ಸಿ.ಗೆ ರೆಫರ್ ಮಾಡೋಣ, ನಮ್ಮ ಅಭ್ಯಂತರವೇನೂ ಇಲ್ಲ. But the accounts have got to be audited. ಪಿ.ಎ.ಸಿ. ಯವರು ಆಡಿಟ್ ಮಾಡಿಸುತ್ತಾರೆಯೇ ? ಆಡಿಟ್ ರಿಪೋರ್ಟ್ ಮೇಲೆ ಪಿ.ಎ.ಸಿ. ಅಧಿಕಾರಿಗಳನ್ನು ಎಕ್ಸಾಮಿನ ಮಾಡುವುದು

An hon. Member : They can enquire into it.

ಅಧ್ಯಕ್ಷರು : ಎ.ಜಿ.ಯವರ ಆಡಿಟ್ ಮುಗಿದ ನಂತರ ರೆಸ್ಪೆಕ್ಟಿವ್ ಇಯರ್ಸ್‌ನ ಆಡಿಟ್ ಪ್ಯಾರಾಗಳನ್ನು ಪಿ.ಎ.ಸಿ.ಯವರು ಡೆಲಿಬರೇಟ್ ಮಾಡುತ್ತಾರೆ. ಆದರೆ, ಇಲ್ಲಿ ಆಡಿಟ್ ಆಗಿಲ್ಲ.

SRI M. MALLIKARJUNA KHARGE : Any matter referred from the House, PAC can take it up. That is the provision.

ಶ್ರೀ ಜೆ.ಹೆಚ್. ಪಟೇಲ್ : ಇದು ತಮಗೆ ಬಿಟ್ಟಿದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರ್ಕಾರ ಇದನ್ನು ರೆಕಮೆಂಡ್ ಮಾಡಿದರೆ....

MR. SPEAKER : Government has expressed its willingness to subject itself to enquiry.

ಗಮನ ಸೆಳೆಯುವ ಸೂಚನೆಗಳು

ಮಡಿಕೇರಿ ವಕೀಲರ ಸಂಘದಲ್ಲಿ ನಡೆದಿರುವ ಛಾಪಾ ಕಾಗದ ಮಾರಾಟದ ಹಗರಣ

ಶ್ರೀ ಡಿ.ಎಸ್. ಮಾದಪ್ಪ (ಮಡಿಕೇರಿ) : ಮಾನ್ಯ ಅಧ್ಯಕ್ಷರೆ, ಮಡಿಕೇರಿ ವಕೀಲರ ಸಂಘದಲ್ಲಿ ನಡೆದಿರುವ ಛಾಪಾ ಕಾಗದ ಮಾರಾಟದ ಹಗರಣದ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

+ ಶ್ರೀ ಆರ್. ರೋಷನ್‌ಬೇಗ್ (ಗೃಹ ಇಲಾಖಾ ರಾಜ್ಯ ಸಚಿವರು) :ಮಾನ್ಯ ಅಧ್ಯಕ್ಷರೆ, 1997ರ ಏಪ್ರಿಲ್ ಮಾಹೆಯಲ್ಲಿ ಕೊಡಗು ಜಿಲ್ಲಾ ಪೋಲೀಸ್ ಅಧೀಕ್ಷಕರಿಗೆ ಕೊಡಗು ನ್ಯಾಯವಾದಿಗಳ ಸಹಕಾರ ಸಂಘ, ಜಿಲ್ಲಾ ಕೋರ್ಟ್ ಸಂಕೀರ್ಣ, ಮಡಿಕೇರಿ ಇಲ್ಲಿ ನಕಲಿ ಛಾಪಾ ಕಾಗದಗಳು ಮಾರಾಟವಾಗುತ್ತಿದೆ ಎಂದು ಬಂದ ಸುದ್ದಿಯ ಮೇಲೆ, ಸದರಿ ಸಹಕಾರ ಸಂಘದಿಂದ ಮಾರಾಟವಾಗುತ್ತಿದ್ದ ಛಾಪಾ ಕಾಗದಗಳನ್ನು ತರಿಸಿ ಪರಿಶೀಲಿಸಲಾಗಿ ನಕಲಿ ಛಾಪಾ ಕಾಗದವೆಂದು ಕಂಡು ಬಂದಿರುತ್ತದೆ.

ದಿನಾಂಕ : 24.4.1997 ರಂದು ಸಂಜೆ 4.45ಕ್ಕೆ ನ್ಯಾಯವಾದಿಗಳ ಸಹಕಾರ ಸಂಘದ ಕಛೇರಿ, ನ್ಯಾಯವಾದಿಗಳ ಕಛೇರಿ ಹಾಗೂ ಸಹಕಾರ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿ ಅವರ ಮನೆಯ ಮೇಲೆ ಏಕೆ ಕಾಲದಲ್ಲಿ ಪೋಲೀಸರು ದಾಳಿ ಮಾಡಿ, ಖಜಾನೆಯ ನಕಲಿ ಮೊಹರುಗಳನ್ನು ಮತ್ತು ರೂ. 1.2 ಲಕ್ಷ ಬೆಲೆ ಬಾಳುವ ನಕಲಿ ಛಾಪಾ ಕಾಗದಗಳನ್ನು ವಶಪಡಿಸಿಕೊಂಡಿರುತ್ತಾರೆ.

ಈ ಸಂದರ್ಭದಲ್ಲಿ ಸಹಕಾರ ಸಂಘದ ಕಾರ್ಯದರ್ಶಿಯಾದ ಶ್ರೀ ಮಾಚಯ್ಯ, ಅಧ್ಯಕ್ಷರಾದ ಶ್ರೀ ಎಂ.ಜಿ. ಪ್ರಕಾಶ್ ಹಾಗೂ ಮಾರಾಟ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ಪ್ರಮೀಳ ಮತ್ತು ಶ್ರೀಮತಿ ಹಂಸ ಅವರನ್ನು ಬಂಧಿಸಿ ಪ್ರಶ್ನಿಸಲಾಗಿ ಕೆಳಕಂಡ ವಿಷಯಗಳು ಬೆಳಕಿಗೆ ಬಂದಿರುತ್ತದೆ.